ದಿನಾಂಕ 20.7.2001ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು.

ಸೂಳ್ಯ ತಾಲ್ಲೂಕಿನ ಬಸ್ ನಿಲ್ದಾಣ ನಿರ್ಮಾಣ

2010(2777)

ಶ್ರೀ ಅಂಗಾರ ಎಸ್(ಸೂಳ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗಿದೆಯೆ;

ಆ) ಸುಳ್ಯ ತಾಲ್ಲೂಕು ಕೇಂದ್ರವಾದ ಸುಳ್ಯ ನಗರದಲ್ಲಿ ಬಸ್ ನಿಲ್ದಾಣಕ್ಕಾಗಿ ಸ್ಥಳವನ್ನು ವಶಪಡಿಸಿಕೊಂಡಿದ್ದರೂ ಸಹ ಇದುವರೆಗೂ ಬಸ್ ನಿಲ್ದಾಣ ಮಾಡದೇ ಇರಲು ಕಾರಣಗಳೇನು;

ಇ) ಬಸ್ ನಿಲ್ದಾಣದ ಅವಶ್ಯಕತೆ ಇದ್ದು ಎಂದಿನಿಂದ ಮಾಡಲಾಗುವುದು?

ಶ್ರೀ ಪಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ತಾತ್ಕಾಲಿಕವಾಗಿ ಬಸ್ ನಿಲ್ದಾಣದ ವ್ಯವಸ್ಥೆ ಮಾಡಲಾಗಿದೆ.

ಆ) ಹಾಲಿ ಇರುವ 0.79 ಎಕರೆ ನಿವೇಶನದ ಹಿಂದುಗಡೆ 0.60 ಎಕರೆ ಜಮೀನಿನಲ್ಲಿ (0.40 ಎಕರೆ) ಜಮೀನನ್ನು ಸಂಸ್ಥೆ ವಶಕ್ಕೆ ಪಡೆಯಲು ಕ್ರಮ ಜರುಗಿಸಲಾಗಿದೆ. ಈ ಪೈಕಿ 0.20 ಎಕರೆ ಜಮೀನಿನ ಮಾಲೀಕರು ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವರು. ಜಮೀನಿನ ವ್ಯಾಜ್ಯ ಇತ್ಯರ್ಥವಾಗದೆ ಇರುವುದರಿಂದ ಪೂರ್ಣ ಪ್ರಮಾಣದ ಬಸ್ ನಿಲ್ದಾಣ ನಿರ್ಮಾಣ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

ಇ) 0.20 ಎಕರೆ ಜಮೀನಿನ ವ್ಯಾಜ್ಯ ಇತ್ಯರ್ಥವಾದ ನಂತರ ಆ ಜಮೀನನ್ನು ಪಡೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಮಂಗಳೂರು ವಿಭಾಗದಲ್ಲಿ ಚಾಲಕರು ಹಾಗೂ ನಿರ್ವಾಹಕರಿಗೆ ಹೆಚ್ಚುವರಿ ಭತ್ಯೆ.

2011(2778)

ಶ್ರೀ ಅಂಗಾರ ಎಸ್.(ಸೂಳ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?